ಶಿಕ್ಷಣ ಸಚಿವರ ಪರವಾಗಿ ಈ ಹೇಳಿಕೆಯನ್ನು ಮಾಡುತ್ತೇನೆ.

ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪದವಿ ಪ್ರಮಾಣ ಪತ್ರ ಪಡೆದುಕೊಳ್ಳಲು ಘಟಿಕೋತ್ಸವದಲ್ಲಿ ಪಾಲ್ಗೊಳ್ಳುವವರಿಗೆ ರೂ 45.00 ಗಳನ್ನು ವಿಧಿಸಲಾಗುತ್ತಿದೆ. ಘಟಿಕೋತ್ಸವದಲ್ಲಿ ಪಾಲ್ಗೊಳ್ಳದೇ ಇರುವುದರಿಂದ ರೂ70.00 ಶುಲ್ಕವನ್ನು ವಿಧಿಸಲಾಗುತ್ತಿದೆ. ಈ ರೂ. 70.00 ಗಳಲ್ಲಿ 15-00 ರೂಪಾಯಿಗಳನ್ನು ರಿಜಿಸ್ಟ್ರಾರ್ಡ್ ಅಂಚೆ ಮೂಲಕ ಪದವಿ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ವಿದ್ಯಾರ್ಥಿಗೆ ಕಳುಹಿಸುವುದಕ್ಕೆ ಉಪಯೋಗಿಸಲಾಗುತ್ತಿದೆ.

ಅಂಚೆ ರಿಜಿಸ್ಟರ್ಡ್ ಮೂಲಕ ಕಳುಹಿಸಿದ ಪದವಿ ಪ್ರಮಾಣ ಪತ್ರಗಳಲ್ಲಿ ಸುಮಾರು ಶೇಕಡ 50 ರಷ್ಟು ವಾಪಸ್ಸು ಬಂದಿದ್ದು ವಿದ್ಯಾರ್ಥಿಗಳಿಗೆ ಇದರಿಂದ ತೊಂದರೆ ಉಂಟಾಗಿರುವುದನ್ನು ಗಮನಿಸಿ ವಿಶ್ವವಿದ್ಯಾನಿಲಯವು ಸಂಬಂಧಪಟ್ಟ ಆಯಾ ಕಾಲೇಜುಗಳ ಮುಖಾಂತರ ಪದವಿ ಪ್ರಮಾಣ ಪತ್ರ ವಿದ್ಯಾರ್ಥಿಗಳಿಗೆ ತಲುಪಿಸಲು ಏರ್ಪಾಟು ಮಾಡಲಾಗಿದೆ. ಈ ಬಾರಿ ಘಟಿತೋತ್ಸವದಲ್ಲಿ ಪಾಲ್ಗೊಳ್ಳದವರಿಗೆ ಪದವಿ ಪ್ರಮಾಣ ಪತ್ರ ವಿತರಿಸಲುಸಂಬಂಧಪಟ್ಟ ಕಾಲೇಜುಗಳಿಗೆ ಸೂಚನೆ ನೀಡಲಾಗಿದೆ.

ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯ ಮುಂದೆ ಈ ಸಂಬಂಧ ಪ್ರತಿ ವಿದ್ಯಾರ್ಥಿಗೆ ರೂ.15-00 ಗಳನ್ನು ಮರುಪಾವತಿ ಮಾಡುವ ಪ್ರಸ್ತಾಪವಿರುತ್ತದೆ. ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಸಂಬಂಧಪಟ್ಟ ಪ್ರತಿ ವಿದ್ಯಾರ್ಥಿಗೆ 15-00 ರೂಪಾಯಿಗಳನ್ನು ಆಯಾ ಕಾಲೇಜುಗಳ ಮೂಲಕ ಹಿಂತಿರಿಗಿಸುವ ಏರ್ಪಾಡು ಮಾಡಲಾಗುವುದು.

6. ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನ ಇಟಕಾಲ್ ಗ್ರಾಮದಲ್ಲಿ ನಡೆದ ಕೊಲೆ.

ಶ್ರಿ ಬಸವಂತರೆಡ್ಡಿ ಮೊತಕಪಲ್ಲಿ : (ಸೇಡಂ):- ಮಾನ್ಯ ಅಧ್ಯಕ್ಷರೆ, ಗುಲಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನ ಇಟಕಾಲ್ ಗ್ರಾಮದ ಭಯ ಭೀತಿ ಹೊಂದಿರುವ ನಾಗರೀಕರು ಸಾರ್ವಜನಿಕ ಹಿತದೃಷ್ಟಿಯಿಂದ ದಿನಾಂಕ :25-2-92 ರಂದು ಒಂದು ಅರ್ಜಿ ಸಲ್ಲಿಸಿ ಬಸಿರೆಡ್ಡಿ ಗವಿನೋಳ್ ಎಂಬುವರನ್ನು ದಿನಾಂಕ :22-02-92 ರಂದು ಅಮಾನುಷವಾಗಿ ಕೊಲೆ ಮಾಡಿ ಮಣ್ಣು ಮಾಡಿದರೂ ಸಹ ಸಂಬಂಧಪಟ್ಟ ಪೋಲೀಸರು ಯಾವ ಕ್ರಮ ಕೈಗೊಂಡಿಲ್ಲವೆಂದು ತಿಳಿದಿದೆ ಅಷ್ಟೆ.

ನಂತರ ದಿನಾಂಕ:2-3-1992 ರಂದು ಮೃತರ ಮೊಮ್ಮಗ ಈ ಅಮಾನುಷ ಕೊಲೆಯ ಬಗ್ಗೆ ಅರ್ಜಿ ಸಲ್ಲಿಸಿದರೂ ಸಹ ಯಾವ ಕ್ರಮವಿಲ್ಲವೆಂದು ಮಾಹಿತ ಸಿಕ್ಕಿರುವುದಕ್ಕಾಗಿ ನಾವು ಐದು ಮಂದಿ ಶಾಸಕರು ದಿನಾಂಕ6-3-92 ರಂದು ಗಮನ ಸೆಳೆಯುವ ಸೂಚನೆಯನ್ನು ಚರ್ಚೆಗಾಗಿ ಕೊಟ್ಟರೂ ಸಹ ಯಾವ ಮಾಹಿತಿ ಸಿಕ್ಕಿಲ್ಲ ಏಕೆ ? ಈ ಕೊಲೆಯ ಬಗ್ಗೆ ಸವಿಸ್ತಾರವಾಗಿ ಮಾಹಿತಿ ಎಂದರೆ, ಪ್ರಥಮ ಮಾಹಿತಿ ವರದಿ (ಎಫ್.ಆಯ್.ಆರ್) ಜಾರಿ ಮಾಡಿದ್ದು ಯಾವಾಗ ? ಭಯ ಭೀತಿ ಗೊಂಡಿರುವ ಜನರ ಅರ್ಜಿ ಮುಟ್ಟಿದ ತಕ್ಷಣವೆ ಪ್ರಥಮ ಮಾಹಿತಿ ವರದಿ ಜಾರಿ ಮಾಡಿಲ್ಲವೇಕೆ? ತಕ್ಷಣವೆ ಶವವನ್ನು ವೈದ್ಯಕೀಯ ಪರೀಕ್ಷೆಗಾಗಿ ತೆಗೆಸಿಲ್ಲವೇಕೆ ?

ಇಷ್ಟು ವಿಳಂಬ ಮಾಡಿದ್ದಕ್ಕಾಗಿ ಪೋಲೀಸ್ ಇಲಾಖೆ ಅಧಿಕಾರಿಗಳ ಕೈವಾಡವಿದೆ ಎಂಬುದು ಶಂಕೆಗೆ ಆಸ್ಪದವಾಗಿಲ್ಲವೇ ?

ಈಗಲಾದರೂ ಸಹ ತಪ್ಪಿತಸ್ಥರನ್ನು ಬಂಧಿಸಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರಿ ಧರ್ಮಸಿಂಗ್ : (ಗೃಹ ಸಚಿವರು):-ಮಾನ್ಯ ಅಧ್ಯಕ್ಷರೆ, ಮೃತರಾದ ಶ್ರಿ

ಬಸವಂತರೆಡ್ಡಿ, ವಯಸ್ಸು 60, ಇಟ್ಕಲ್ ಗ್ರಾಮ, ಇವರ ಮೊಮ್ಮಗನಾದ ಶ್ರೀ ನರಸರೆಡ್ಡಿ, ತಂದೆ ರಾಮರೆಡ್ಡಿ, ಯಾನೆಗುಂದಿ ಗ್ರಾಮ ಇವರು ದಿನಾಂಕ 8-3-92 ರಂದು ಸೇಡಂ ತಾಲ್ಲೂಕು ಮುಧೋಳ್ ಪೋಲೀಸ್ ಠಾಣೆಗೆ ಈ ಬಗ್ಗೆ ದೂರು ನೀಡಿದ್ದು ದೂರಿನ ವಿವರ ಹೀಗಿದೆ :- ದಿನಾಂಕ 22-2-92 ರಂದು ತಮ್ಮ ತಾತನವರಾದ ಶ್ರೀ ಬಸವಂತರೆಡ್ಡಿ ಇವರು ಇಟ್ಕಲ್ ಗ್ರಾಮದಲ್ಲಿ ಮೃತರಾಗಿದ್ದ ಸುದ್ದಿ ತಿಳಿದು ತಾವು ಹಾಗೂ ಅಜ್ಜಿಯವರಾದ ಶ್ರೀಮತಿ ಶಿವಮ್ಮ (ಮೃತರ ಮೊದಲನೆಯ ಪತ್ನಿ) ಇವರು ತಮ್ಮ ತಾತನವರ ಶವ ಸಂಸ್ಕಾರಕ್ಕಾಗಿ ಇಟ್ಕಲ್ ಗ್ರಾಮಕ್ಕೆ ಹೋಗಿದ್ದು ಅದನ್ನು ಮುಗಿಸಿಕೊಂಡು ಯಾನೆಗುಂದಿ ಗ್ರಾಮಕ್ಕೆ ವಾಪಸ್ಸು ಬಂದಿರುವುದಾಗಿ ತಿಳಿಸಿದ್ದಾರೆ. ಇದಾದನಂತರ ಒಂಭತ್ತು ದಿನಗಳ ಮೇಲೆ ಕರ್ಮಾಚರಣೆಗಾಗಿ ಇಟ್ಕಲ್ ಗ್ರಾಮಕ್ಕೆ ಹೋದಾಗ ಅಲ್ಲಿ ತಮ್ಮ ತಾತನವರ ಎರಡನೆಯ ಪತ್ನಿಯಾದ ಶ್ರೀಮತಿ ವೆಂಕಟಮ್ಮ ಬೇರೆಯವರೊಂದಿಗೆ ಅನೈತಿಕ ಸಂಬಂಧವನ್ನು ಹೊಂದಿದ್ದರು ಎಂಬುದು ತಿಳಿದು ಬಂತು, ಹಾಗೂ ಆಕೆಯು ಅವರ ತಾತನವರಿಗೆ : (ಮೃತರಿಗೆ) ವಿಷ ಪ್ರಯೋಗ ಮಾಡಿ ಇಲ್ಲವೆ ನೇಣು ಹಾಕಿ ಸಾಯಿಸಿರಬಹುದೆಂದು ತಿಳಿದುಬಂದಿರುವುದಾಗಿ ತಿಳಿಸಿದ್ದಾರೆ. ತಮ್ಮ ತಾತನವರ ಸಾವು ಸಂಶಯಾತ್ಮಕವಾದ ಸನ್ನಿವೇಶಗಳಲ್ಲಿ ಸಂಭವಿಸಿದ್ದು ಈ ಬಗ್ಗೆ ತನಿಖೆ ನಡೆಸಬೇಕೆಂದು ಲಿಖಿತ ದೂರು ನೀಡಿದ್ದಾರೆ.

ಈ ದೂರಿನನ್ವಯ ಪಿ.ಎಸ್.ಐ.ಮುಧೋಳ ಇವರು ಸೆಕ್ಷನ್ 174 III ಸಿಆರ್‌ಪಿಸಿ ಅನ್ವಯ ಯುಡಿಆರ್ ಸಂಖ್ಯೆ : 4:92 ರಂತೆ ಕೇಸು ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡಿದ್ದಾರೆ. ಅಂದೇ ಅವರು ಅಸಿಸ್ಟೆಂಟ್ ಕಮೀಷನರ್ ಸೇಡಂ ಇವರಿಗೆ ಹೂತಿಟ್ಟ ಮೃತ ದೇಹವನ್ನು ಹೊರ ತೆಗೆಯುವುದಕ್ಕೆ ಕೋರಿಕೆಯನ್ನು ಸಲ್ಲಿಸಿದ್ದಾರೆ. ಅಸಿಸ್ಟೆಂಟ್ ಕಮೀಷನರ್, ಸೇಡಂ ಇವರು ಈ ಪ್ರಕರಣದ ಎಲ್ಲಾ ವಿವರಗಳನ್ನು ಪರಿಶೀಲಿಸಿದ ನಂತರ ದಿನಾಂಕ 17-3-92 ರಂದು ತಹಶೀಲ್ದಾರ ಸೇಡಂ ಇವರಿಗೆ ಹೂತಿಟ್ಟ ಶವವನ್ನು ಹೊರತೆಗೆಯಲು ಆದೇಶ ನೀಡಿದ್ದಾರೆ. ಶವದ ಪರೀಕ್ಷಾ ವಿಧಾನವು 17-3-92 ರಂದೇ ಪ್ರಾರಂಭಗೊಂಡಿದ್ದು ಅಂದು ಕತ್ತಲೆಯಾದುದರಿಂದ ದಿನಾಂಕ 18-3-92 ರಂದು ತಹಶೀಲ್ದಾರ ಸೇಡಂ ಇವರ ಸಮ್ಮುಖದಲ್ಲಿ ಶವದ ಮರಣೋತ್ತರ ಪರೀಕ್ಷೆಯನ್ನು ಕೈಗೊಳ್ಳಲಾಗಿದೆ. ಸಿ. ಪಿ. ಸಿ. ಸೇಡಂ ಇವರಿಗೆ ವೈಯಕ್ತಿಕವಾಗಿ ಈ ಪ್ರಕರಣದ ತನಿಖೆಯನ್ನು ಕೈಗೊಳ್ಳಲು ಸೂಚಿಸಲಾಗಿದೆ. ದಿನಾಂಕ 25-2-92 ರಂದು ಬಸವಂತರೆಡ್ಡಿ ಗವಿನೋಳು ಇವರ ಸಾವಿನ ಬಗ್ಗೆ ಪೋಲೀಸ್ ಠಾಣೆಗೆ ಯಾರೂ ದೂರು ನೀಡಿರುವುದಿಲ್ಲ. ದಿನಾಂಕ 8-3-92 ರಂದು ಮಾತ್ರ ಲಿಖಿತ ದೂರು ನೀಡಲಾಗಿದ್ದು, ಆಗ ತನಿಖೆಯನ್ನು ಕೈಗೊಳ್ಳಲಾಗಿದೆ. ದೂರುದಾರರಾದ ಶ್ರೀ ನರಸರೆಡ್ಡಿ ಇವರಿಗೆ ಸಾಕಷ್ಟು ಪೋಲೀಸ್ ರಕ್ಷಣೆಯನ್ನು ನೀಡಲಾಗಿದೆ.

7. ಬೆಂಗಳೂರಿನ ಮಹಾಲಕ್ಷ್ಮಿ ಬಡಾವಣೆಯ ಅಪರಾಧ ವಿಭಾಗದ ಆರಕ್ಷಕ ಉಪನಿರೀಕ್ಷಕರ ಮೇಲಿರುವ ಆಪಾದನೆ.

ಶ್ರೀ ಹೆಚ್.ಎಂ.ರೇವಣ್ಣ (ಮಾಗಡಿ):- ಮಾನ್ಯ ಅಧ್ಯಕ್ಷರೆ, ಬೆಂಗಳೂರಿನ ಮಹಾಲಕ್ಷ್ಮಿ ಬಡಾವಣೆಯಲ್ಲಿಅಪರಾಧ ವಿಭಾಗದ ಆರಕ್ಷರ ಉಪ ನಿರೀಕ್ಷಕರು1990ನೇ ಇಸವಿಯಿಂದೀಚೆಗೆ ಅಂದರೆ ವರ್ಷದಲ್ಲಿ ಸುಮಾರು 32 ಗಂಭೀರ ಪ್ರಕರಣಗಳನ್ನು ದಾಖಲಿಸದೇ ಕಳ್ಳಕಾಕರಿಗೆ, ದರೋಡೆಕೋರರಿಗೆ ಬೆಂಬಲ ನೀಡಿ ಕೋಟ್ಯಾಂತರ ರೂಪಾಯಿಗಳ ಆಸ್ತಿ ಪಾಸ್ತಿಗಳನ್ನು ಹೊಂದಿರುವ ಇವರು ಸೇವೆಗೆ ಸೇರಿದಾಗಿನಿಂದ ಇನ್ನೂ ಅನೇಕ ಅಪರಾಧಗಳನ್ನು ಎಸಗಿರುವ ಅನುಮಾನ ವ್ಯಕ್ತವಾಗುತ್ತಿರುವುದನ್ನು ಆಧರಿಸಿ ಇವರ ಇಡೀ ಪ್ರಕರಣವನ್ನು ಸಿ.ಓ.ಡಿ.ಗೆ ಅಥವಾ